# ಆಯಿತೆ ಅರವತ್ತು!

ಶ್ರೀ ಬನ್ನಂಜೆ ಗೋವಿಂದಾಚಾರ್ಯ

ಅರವತ್ತು ಆಯಿತು ಎಂದರೆ ಕೆಲವರಿಗೆ ಶಾಂತಿ; ಕೆಲವರಿಗೆ ಅಶಾಂತಿ,
ಅರವತ್ತು ವರ್ಷಗಳ ಹಿಂದೆ ನಾನು ತಾಯಿಯ ಹೊಟ್ಟೆಯಲ್ಲಿದ್ದೆ,
ಅದಕ್ಕೂ ಹಿಂದೆ ಎಲ್ಲಿದ್ದೆನೋ ಗೊತ್ತಿಲ್ಲ.
ತಾಯಿ ಬಸಿರಿಂದ ಒಂದು ದಿನ ಭೂಮಿಗೆ ಬಿದ್ದೆ,
ಕಣ್ಣು ಬಿಟ್ಟೆ, ಬಾಯಿ ಬಿಟ್ಟೆ,
ತಾಯಿ ಮೊಲೆ ತೊಟ್ಟು ನನ್ನ ತುಟಿಯನ್ನು ಆವರಿಸಿತು,
ನಾನು ಕಣ್‌ಕಣ್ಣು ಬಿಟ್ಟೆ.
ಬಲವಾಗಿ ಚೀಪಿದೆ, ರುಚಿಯಾದ ಹಾಲು
ಹೀಗೆ ಬೆಳೆದೆ, ದೊಡ್ಡವನಾದೆ,
ಮೀಸೆ ಚಿಗುರಿತು.
ಮೀಸೆಯಡಿಯಲ್ಲಿ ಯೌವನ ಚಿಗುರಿತು.
ದೊಡ್ಡವರು ಯಾವುದೋ ಹುಡುಗಿಯನ್ನು ತೋರಿಸಿದರು.
ಪಕ್ಕದಲ್ಲಿ ಹೆಣ್ಣುಬೇಕು ಎಂದು ಬಯಸುವ ವಯಸ್ಸು,
ಅವರು ತೋರಿಸಿದ ಕೊರಳಿಗೆ ಮಾಲೆ ಹಾಕಿದೆ.
ಆ ಬಸಿರಲ್ಲಿ ನನ್ನ ಬೀಜವನ್ನಿಟ್ಟೆ,
ಆ ಹೆಣ್ಣಿಗೂ ಮಕ್ಕಳಾದವು.
ಅವಳ ಮೊಲೆ ತೊಟ್ಟು ಆ ಮಕ್ಕಳ ತುಟಿಯನ್ನು ಮುತ್ತಿದವು.
ಆ ಮಕ್ಕಳೂ ಬೆಳೆದವು.
ಅವರ ಕೈಗೂ ಮಾಲೆ ಬಂತು.
ಅದನ್ನು ಹಾಕಿಸಿ ಕೊಳ್ಳುವ ಕೊರಳು ಬಂತು.
ಮತ್ತೆ ಬಸಿರು, ಮತ್ತೆ ಮಕ್ಕಳು.
ಇದು ಮುಗಿಯದ ಚಕ್ರ.
ಚಕ್ರಾರಪಂಕ್ತಿರಿವ ಗಚ್ಛತಿ .....

ಮನುಷ್ಯ ಬಾಲ್ಯದಿಂದ ಮುಪ್ಪಿನ ತನಕ ಎಂಥದೋ ದಾರಿಯಲ್ಲಿ ಸಾಗುತ್ತಾನೆ. ಸ್ತನ ಚಕಿತ! ಯೋನಿ ಚಕಿತ!

ಒಂದೊಂದು ವಯಸ್ಸಿನಲ್ಲಿ ಒಂದೊಂದು ಬಗೆ.
ಮಗುವಾದ, ಅಪ್ಪನಾದ, ಅಜ್ಜನಾದ,
ಕಣ್ಣು ತೆರೆದು ಲಕ್ಷ ಹಾಕಿದಾಗ ಹುಟ್ಟಿದಾಗ ಇದ್ದ ಸಂವತ್ಸರವೆ ಮರಳಿ ಬಂದಿತ್ತು.

ಜನ ನಿನಗೆ ಅರವತ್ತು ಆಯಿತು ಎಂದರು,

ಅರವತ್ತರ ಅರಳು ಮರಳೆ?

ಅಥವ ಬರಿಯ ಅರುಳು ಮರುಳೆ!

ಅರವತ್ತು ಆಯಿತು, ಆದರೆ ಏನಾಯಿತು?

ಐವತ್ತೆಂಟು ಆಗಿರಲಿಲ್ಲವೆ? ಐವತ್ತೊಂಭತ್ತು ಆಗಿರಲಿಲ್ಲವೆ?

ಆಗ ಆಗದ್ದು ಈಗ ಏನಾಯಿತು.

ಜನ ಹೇಳುತ್ತಾರೆ: ಆಗ ನಿನಗೆ ಸ್ವಾಗತಿಸಲು ಹೊಸ ಸಂವತ್ಸರ ಇತ್ತು, ಇನ್ನು ನಿನಗೆ ಹೊಸ ಸಂವತ್ಸರಗಳಿಲ್ಲ, ಇನ್ನು ಅದೇ ಸಂವತ್ಸರಗಳ ಮರಳಿಕೆ. ಪ್ರಭವ, ವಿಭವ, ಶುಕ್ಲ, ಪ್ರಮೋದ, ಪ್ರಜಾಪತಿ ..... (ಅಹಾ! ಹೇಳಿದ ಹಾಗೆ ಪಂಚಾಂಗದವರು ಹೊಸ ಹೊಸ ಸಂವತ್ಸರಗಳನ್ನು ಸೃಷ್ಟಿ ಮಾಡಿದ್ದಾರೆ: ಪ್ರಮೋದೂತ, ಪ್ರಜೋತ್ಪತ್ತಿ, ಪ್ರಮಾದೀಚ! ಆದರೂ ಅರವತ್ತು ಅರವತ್ತೇ!)

ಇನ್ನು ಕೆಲವರು ಹೇಳಿದರು: ನಿನಗೆ ಅರವತ್ತು ಹಿಡಿಯಿತು ಅಂದರೆ ನೀನು ಮುದುಕನಾದೆ, ಅದಕ್ಕೆ ಶಾಂತಿ ಮಾಡು.

ಹೌದಾ? ನಾನು ಮುದುಕನಾದೆನೆ?

ನಾನು ಆಗಿಲ್ಲ ಎಂದರು ಇವರು ಕೇಳುವುದಿಲ್ಲ.

ಹತ್ತು ಮಂದಿ ಸುತ್ತ ಸೇರಿ "ನಿನಗೆ ಅರವತ್ತು, ನಿನಗೆ ಅರವತ್ತು" ಎಂದಾಗ ಹೌದೇನೋ ಎಂದು ನನಗೂ ಗೊಂದಲ.

ನನಗೆ ಅರವತ್ತು ಆಯಿತು.

ಆಗಲಿ, ಅದಕ್ಕೇನಾಗಬೇಕು?

ಶಾಂತಿ ಆಗಬೇಕು ಎಂದರು.

ಅಶಾಂತಿ ಇದ್ದವರಿಗೆ ಶಾಂತಿ ಆಗಬೇಕು.

ನನಗೆ ಅಶಾಂತಿಯೇ ಇಲ್ಲವಲ್ಲ ಎಂದೆ.

ನಿಮಗೆ ಶಾಂತಿ ಮಾಡದೆ ಇದ್ದರೆ ನಮಗೆ ಶಾಂತಿ ಇಲ್ಲ ಎಂದರು.

ಆಗಲಿ ಹಾಗಾದರೆ ಮಾಡೋಣ.

ಆದರೆ ಮುದುಕನಾದೆ ಎಂಬ ಅಶಾಂತಿಯಿಂದಲ್ಲ.

ನಲುವತ್ತಕ್ಕೇ ಮುದುಕರಾಗುವವರುಂಟು.

ಅರವತ್ತಾದರೂ ಮುದುಕರಾಗದವರುಂಟು.

ಬದುಕಿನುದ್ದಕ್ಕೂ ಅಶಾಂತಿಯಿಂದಲೇ ಚಡಪಡಿಸುವವರುಂಟು. ಕೊನೆಯ ಕ್ಷಣದ ತನಕವೂ ಶಾಂತಿಯಿಂದ ಇರುವವರುಂಟು.

ಪ್ರಾಯಃ ಅಶಾಂತಿಯೆ ಮುಪ್ಪಿನ ಮೂಲದ್ರವ್ಯ.

ದೇಹದ ವಯಸ್ಸು ನನಗೆ ಮುಖ್ಯವಲ್ಲ.

ಮಾನಸಿಕವಾಗಿ ನನಗೆ ಮುಪ್ಪು ಬರಲಿಲ್ಲ.

ನಾನಿನ್ನೂ ಯುವಕ.

ನನ್ನ ಜೀವನದುದ್ದಕ್ಕೂ ನನ್ನ ಸಂಗಾತಿಗಳಾಗಿ ನನ್ನನ್ನು ಶಾಂತಿಪರ್ವದತ್ತ ಒಯ್ದಂಥವು ನನ್ನ ಪುಸ್ತಕಗಳು. ಮುಖ್ಯವಾಗಿ ಉಪನಿಷತ್ತುಗಳು ಮತ್ತು ಮಹಾಭಾರತ.

ನನ್ನ ಸಂಸಾರದ ಮಂದಿ ನನ್ನನ್ನು ಮುಪ್ಪಿನತ್ತ ಎಳೆದರೆ ಇವು ನನ್ನನ್ನು ಅನಂತ ಯೌವನದತ್ತ ಎಳೆಯುತ್ತಿವೆ.

ಇದು ನನ್ನದೇ ತಪ್ಪಿರಬಹುದು.

ನಾನು ಮನೆಯಲ್ಲು ಅತಿಥಿಯಂತೆ ಬದುಕಿದೆ.

ನಾನು ಅವರ ಮುಂದೆ ನನ್ನ ಎದೆಯನ್ನು ಬಿಚ್ಚಿಕೊಳ್ಳಲಿಲ್ಲ, ನನ್ನ ಒಳದನಿ ಅವರಿಗೆ ಕೇಳದಿರಲಿ ಎಂದು; ನನ್ನೊಳಗಿನ ನೋವು ಅವರನ್ನು ಕಂಗೆಡಿಸದಿರಲಿ ಎಂದು.

ನಾಡಿನ ಜನ ನನ್ನನ್ನು ಹರಸಿದರು.

ತಮ್ಮ ಎದೆ ತೆರೆದು ತಮ್ಮೆದೆಯಲ್ಲಿ ನನ್ನನ್ನು ಕೂಡಿಸಿಕೊಂಡು ಕೊಂಡಾಡಿದರು.

ನಾನು ಧನ್ಯ.

ಪ್ರೀತಿಯೇ ನನ್ನ ಸಂಪತ್ತು.

ನನ್ನನ್ನು ಪ್ರೀತಿಸುವ ಹೃದಯವೆ ನನ್ನ ಚಂದದ ಅರಮನೆ.

ಜನದ ಹರಕೆ ನನ್ನ ರಕ್ಷೆ.

ನಾನು ಯಾಕೆ ಬಂದೆ ಎನ್ನುವುದು ಗೊತ್ತಿದೆ.

ಅದನ್ನು ಪೂರಯಿಸದೆ ನಾನು ಮರಳುವಂತಿಲ್ಲ.

ಅದರ ಹಿಂದೆ ಏಳು ಶತಮಾನಗಳ ಇತಿಹಾಸವಿದೆ.

ಅದರ ಮುಂದೆ ತೆರೆದ ಖಾಲಿ ಹಾಳೆಗಳಿವೆ.

ಆ ಹಾಳೆಗಳಲ್ಲಿ ಅಕ್ಷರಗಳನ್ನು ತುಂಬಬೇಕು. ಹೌದು, ಎಲ್ಲರೂ ಕ್ಷರವನ್ನು ತುಂಬುತ್ತಾರೆ!

ನಾನು ಅಕ್ಷರವನ್ನು ತುಂಬಬೇಕು.

‘ಯಯಾ ತದಕ್ಷರಮಧಿಗಮ್ಯತೇ’

ಶಾಸ್ತ್ರವನ್ನು ಓದಿ ದೇವರಿಂದ ದೂರಾದ ಮಂದಿಯಿದ್ದಾರೆ!

ದೇವರ ಬಳಿ ಸಾರಿ ಶಾಸ್ತ್ರದಿಂದ ದೂರಾದ ಮಂದಿಯಿದ್ದಾರೆ!

ದೇವರ ಅರಿವಿಗಾಗಿ ರೂಪುಗೊಂಡ ಶಾಸ್ತ್ರ ದೇವರಿಂದ ದೂರ ಸರಿಯಲು ಸಾಧನವಾಯಿತು.

ಶಾಸ್ತ್ರವೆ ಒಂದು ಕೂಪವಾಯಿತು. ಪಂಡಿತರೆಲ್ಲ ಮಾಂಡೂಕೇಯರಾದರು!

ಈ ಭಾವಿಯಿಂದಾಚೆ ಏನೂ ಇಲ್ಲ ಎಂದು ಅವರು ತರ್ಕದಿಂದ ಸಾಧಿಸಿದರು.

ಜನ ಕೆನ್ನೆ ತಟ್ಟಿಕೊಂಡರು. ತಮ್ಮ ತಲೆಯನ್ನು ತಲೆಯಿಲ್ಲದವರ ಕಾಲಿಗೆ ಗಟ್ಟಿಸಿದರು!

ಶಾಸ್ತ್ರದಲ್ಲಿ ಭಗವಂತನ ಪ್ರತಿಷ್ಠೆಯಾಗಬೇಕು. ದೇವರಿಲ್ಲದ ಗರ್ಭಗುಡಿಗೆ ಸುತ್ತುಹೊಡೆದು ಏನೂ ಉಪಯೋಗವಿಲ್ಲ. ಪಾಣಿ ಪೀಠದ ಮೇಲೆ ತಮ್ಮ ಅಹಂಕಾರದ ಪ್ರತಿಷ್ಠೆಯಾಗಿದೆ.

ಅದನ್ನು ಕಿತ್ತು ಭಗವಂತನ ಪ್ರತೀಕವನ್ನು ಮತ್ತೆ ಅಲ್ಲಿ ಇಡಬಲ್ಲೆವೆ?

ಅಹಂಕಾರದ ವಿಜೃಂಭಣೆ ಇರುವಷ್ಟು ಕಾಲ ಯಾವ ಧರ್ಮಕ್ಷೇತ್ರವೂ ಧರ್ಮವನ್ನುಳಿಸಲಾರದು.

ಏಕೆಂದರೆ ಪೀಠದಲ್ಲಿರುವುದು ಧರ್ಮವಲ್ಲ; ನಮ್ಮದೇ ಅಹಂಕಾರ; ನಮ್ಮದೇ ಅವಿದ್ಯೆ; ನಮ್ಮದೇ ಅಪಾತ್ರಭೂತಿತನ.